**ದಿನಾಂಕಃ18.04.2024 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟಿಸವಾಲುಃ ಪ್ರತಿವಾದಿ ಪರ ಶ್ರೀ. ಇ.ಜಿ., ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೂ ಓದಿರುತ್ತೇನೆ. ನನ್ನ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ, ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನನಗೂ ಮತ್ತು ಚಿಕ್ಕನಾಗಮ್ಮ ಅವರ ನಡುವೆ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿಯಲ್ಲ. ಯದುರೂರು ಗ್ರಾಮದ ಆಸ್ತಿಗೆ ಸಂಬಂಧಿಸಿದಂತೆ ನನಗೂ ಮತ್ತು ಚಿಕ್ಕನಾಗಮ್ಮ ಅವರಿಗೂ ಹಲವಾರು ವರ್ಷಗಳಿಂದ ತಕರಾರು ಇದ್ದು, ಆ ಕಾರಣಕ್ಕೆ ನನ್ನ ಮತ್ತು ಅವರ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕನಾಗಮ್ಮ ಅವರ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಚಿಕ್ಕನಾಗಮ್ಮ ಅವರಿಗೆ ಪುಟ್ಟರಾಮಸ್ವಾಮಿ ಮತ್ತು ತುಳಸಮ್ಮ ಎಂದು ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರಿಗೆ ಬಾಬುರೆಡ್ಡಿ ಮತ್ತು ತುಳಸಮ್ಮ ಎಂದು ಇಬ್ಬರು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಬಾಬುರೆಡ್ಡಿ ಅವರು ಚಿಕ್ಕನಾಗಮ್ಮ ಅವರ ಮಗ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಸಮಾದಿ ಇರುತ್ತದೆ ಎಂದು ನುಡಿಯುತ್ತಾರೆ. ಚಿಕ್ಕನಾಗಮ್ಮ ಅವರು "ಚಿಕ್ಕನಾಗಮ್ಮ" ಎಂದು ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿ.5 ರಲ್ಲಿ ಕಂಡುಬರುವ ಸಹಿ ಚಿಕ್ಕನಾಗಮ್ಮ ಅವರದ್ದೆ ಇರುತ್ತದೆ ಎಂದರೆ ಸರಿ. ನಿಪಿ.6 ರಲ್ಲಿರುವ ಸಹಿ ಕೂಡ ಚಿಕ್ಕನಾಗಮ್ಮ ಅವರದ್ದೇ ಇರುತ್ತದೆ. ನಿಪಿ.6 ರಲ್ಲಿರುವ ಸಹಿ ಚಿಕ್ಕನಾಗಮ್ಮ ಅವರದ್ದು ಇದ್ದು, ಅವರು ಬೇರೆ ರೀತಿ ಸಹಿ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ, ನಿಪಿ.6(ಎ) ರಲ್ಲಿ ಕಂಡುಬರುವ ಸಹಿಯನ್ನು ಚಿಕ್ಕನಾಗಮ್ಮ ನನ್ನ ಕಣ್ಣಿ ಮುಂದೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.6(ಎ) ಸಹಿ ಚಿಕ್ಕನಾಗಮ್ಮ ಅವರದ್ದಲ್ಲ, ಸದರಿ ನಿಪಿ.6 ಕ್ಕೂ ಚಿಕ್ಕನಾಗಮ್ಮ ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕನಾಗಮ್ಮ ಮತ್ತು ಅವರ ಕುಟುಂಬದವರು ನಿಪಿ.6 ರ ಕ್ರಯದ ಕರಾರು ಪತ್ರವನ್ನು ವಾದಿಗೆ ಯಾವತ್ತೂ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ದಾಖಲೆಯನ್ನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ.6 ನ್ನು ದಿನಾಂಕಃ 28.05.2012 ರಂದು ಬರೆಯಲಾಗಿದೆ. ಆ ದಿನದಂದು ಚಿಕ್ಕನಾಗಮ್ಮ ಮತ್ತು ಅವರ ಕುಟುಬಂದವರು ಸದರಿ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಚಿಕ್ಕನಾಗಮ್ಮ ಅವರೆ ಸಾಕ್ಷಿಯಾಗಿ ಸಹಿ ಮಾಡಲು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಚಿಕ್ಕನಾಗಮ್ಮ ಅವರಿಗೆ ಈಗ ಸುಮಾರು 85 ವರ್ಷ ಮೇಲ್ಪಟ್ಟು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಅಂದಾಜು 80 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಿಕ್ಕನಾಗಮ್ಮ ನಿಪಿ.6 ರ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಮತ್ತು ಯಾವುದೇ ಮುಂಗಡ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಆಸ್ತಿಯು ಚಿಕ್ಕನಾಗಮ್ಮ ಅವರಿಗೆ ಅವರ ಗಂಡ ಮೃತಪಟ್ಟ ನಂತರ ಬಂದ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಚಿಕ್ಕನಾಗಮ್ಮ ಅವರ ಮಕ್ಕಳಿಗೂ ಸಹಾ ಭಾಗ ಇರುತ್ತದೆ ಎಂದರೆ ಸರಿಯಲ್ಲ. ನಾನು, ರಾಮಕೃಷ್ಣಪ್ಪ, ರೆಡ್ಡಪ್ಪ ಮತ್ತು ಸೋಮಶೇಖರ್ ರೆಡ್ಡಿ ಸೇರಿಕೊಂಡು ನಿಪಿ.1 ನ್ನು ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಿಕ್ಕನಾಗಮ್ಮ ಅವರ ಕುಟುಂಬಕ್ಕೂ ನನಗೂ ಆಗದ ಕಾರಣ ನಾನು ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.

<u>ದಿನಾಂಕಃ18.04.2024 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.</u>

<u>ಪಾಟಿಸವಾಲುಃ ಪ್ರತಿವಾದಿ ಪರ ಶ್ರೀ. ಇ.ಜಿ., ವಕೀಲರಿಂದಃ</u>

ನಾನು 2011 ರಿಂದ ಪತ್ರಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಕ್ರಯದ ಕರಾರು ಪತ್ರವನ್ನು ಬರೆಯಬೇಕಾದಾಗ ಸದರಿ ಆಸ್ತಿಯ ಮೂಲ ದಾಖಲೆಗಳನ್ನು ಪರಿಶೀಲಿಸಬೇಕು ಎಂದರೆ ಸರಿ. ಯಾವುದೇ ದಾಖಲೆ ಬರೆದಾಗ ನಾನು ನಿರ್ವಹಿಸುವ ರಿಜಿಸ್ಟರ್ ನಲ್ಲಿ ನಮೂದು ಮಾಡಿ ಪಕ್ಷಗಾರರ ಸಹಿಗಳನ್ನು ಪಡೆದು ವರ್ಷಕೊಮ್ಮೆ ಸದರಿ ರಿಜಿಸ್ಟರ್ ನ್ನು ಉಪನೋಂದಣಾಧಿಕಾರಿಗಳ ಸಮಕ್ಷಮ ಹಾಜರುಪಡಿಸಬೇಕು ಎಂದರೆ ಸಾಕ್ಷಿಯು ಅದನ್ನು ಈಗ ಅನುಸರಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ರಿಜಿಸ್ಟರ್ ನ್ನು ವರ್ಷಕೊಮ್ಮೆ ಉಪನೋಂದಣಾಧಿಕಾರಿಗಳಿಗೆ ಹಾಜರುಪಡಿಸಿ ಅವರ ಸಹಿಯನ್ನು ಪಡೆಯಬೇಕಿದ್ದು, ಸದರಿ ನಿಯಮವನ್ನು ಅನುಸರಿಸದಿದ್ದರೆ ನಮ್ಮ ಪರವಾನಗೆ ರದ್ದಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಶುದ್ಧ ಕ್ರಯಪತ್ರಕ್ಕೆ ಮತ್ತು ಇತರೆ ನೋಂದಣಿ ಮಾಡುವ ಪತ್ರಗಳಿಗೆ ಮಾತ್ರ ನಾವು ಸದರಿ ನಿಯಮವನ್ನು ಅನುಸರಿಸುತ್ತಿದ್ದೇವೆ ಎಂದು ನುಡಿಯುತ್ತಾರೆ.

ನಿಪಿ.6 ರ ಕರಾರು ಪತ್ರಕ್ಕೆ ಛಾಪಾ ಕಾಗದವನ್ನು ನಾಗಮ್ಮ ಅವರ ಹೆಸರಿನಲ್ಲಿ ತಂದಿರಬಹುದು. ನಾಗಮ್ಮ ಮತ್ತು ಚಿಕ್ಕನಾಗಮ್ಮ ಬೇರೆ ಬೇರೆ ಇರುತ್ತಾರೆ ಎಂದರೆ ಸರಿಯಲ್ಲ. ಚಿಕ್ಕನಾಗಮ್ಮ ಅವರು ತಮ್ಮ ಸಹಿಯನ್ನು ಚಿಕ್ಕನಾಗಮ್ಮ ಎಂತಲೇ ಮಾಡುತ್ತಾರೆ ಎಂದರೆ ಸರಿ. ಪತ್ರಬರೆಯುವ ಕಾಲಕ್ಕೆ ಚಿಕ್ಕನಾಗಮ್ಮ ಅವರು ಯಾವುದೇ ಗುರುತಿನ ದಾಖಲೆಯನ್ನು ಕೊಟ್ಟಿರುವುದಿಲ್ಲ. ಪತ್ರ ಬರೆಯುವಾಗ ಸದರಿ ಆಸ್ತಿಯ ಮೂಲ ಮಾಲೀಕರ ಬಗ್ಗೆ ತಿಳಿದು ಪತ್ರ ಬರೆಯುತ್ತೇವೆ ಎಂದರೆ ಸರಿ. ಚಿಕ್ಕನಾಗಮ್ಮ ಎಂದು ಹೆಸರು ಹೇಳಿಕೊಂಡು ಬೇರೆ ಯಾರಾದರು ಬಂದು ನಾನೇ ಚಿಕ್ಕನಾಗಮ್ಮ ಎಂದು ಹೇಳಿದರೆ ನಾನು ಅದನ್ನು ಪರಿಶೀಲಿಸದೇ ಕರಾರು ಪತ್ರ ತಯಾರಿಸಿ ಅವರ ಸಹಿ ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ.

2011 ರಲ್ಲಿ ಯಾವುದೇ ಕರಾರು ಪತ್ರವನ್ನು ನೋಂದಾವಣೆ ಮಾಡಬಹುದಿತ್ತು ಎಂದರೆ ಸರಿ. ಆ ಕಾಲಕ್ಕೆ ಚಿಕ್ಕನಾಗಮ್ಮ ಅವರು ಮತ್ತು ಅವರ ಕುಟುಂಬದವರು ನನ್ನ ಬಳಿ ಬಂದು ಯಾವುದೇ ಕರಾರು ಪತ್ರ ಬರೆದುಕೊಡದ ಕಾರಣ ನಾನು ಸದರಿ ಕರಾರು ಪತ್ರವನ್ನು

ನೊಂದಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. 2009.10 ರಲ್ಲಿ ಚಿಕ್ಕನಾಗಮ್ಮ ಅವರ ಹೆಸರಿನಲ್ಲಿ ಸದರಿ ಆಸ್ತಿಯ ಖಾತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕನಾಗಮ್ಮ ಹೆಸರಿನಲ್ಲಿ ಮೊದಲೇ ದಾಖಲೆಗಳು ಸರಿ ಇದ್ದ ಕಾರಣ, ದಾಖಲೆಗಳನ್ನು ಸರಿಪಡಿಸಿಕೊಂಡು ನಂತರ ಶುದ್ಧ ಕ್ರಯಪತ್ರ ಬರೆದುಕೊಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಪತ್ರ ಬರೆಯು ಕಾಲಕ್ಕೆ ದಾಖಲೆಗಳನ್ನು ಪರಿಶೀಲಿಸಿ ಸದರಿ ಕರಾರು ಪತ್ರವನ್ನು ಬರೆದಿರುತ್ತೇನೆ. ನಾನು ಕರಾರು ಪತ್ರ ಬರೆಯು ಕಾಲಕ್ಕೆ ಸದರಿ ಆಸ್ತಿಯ ಖಾತೆ ಚಿಕ್ಕನಾಗಮ್ಮ ಅವರ ಹೆಸರಿನಲ್ಲಿತ್ತು. ನಾನು ಸದರಿ ದಾಖಲೆಯಲ್ಲಿ ಕರಾರು ಪತ್ರ ಬರೆದ 9 ತಿಂಗಳುಗಳ ಒಳಗಾಗಿ ದಾಖಲೆಗಳನ್ನು ಸರಿಪಡಿಸಿಕೊಂಡು ಶುದ್ಧ ಕ್ರಯಪತ್ರ ನೊಂದಾವಣೆ ಮಾಡಿಕೊಡಬೇಕು ಎಂದು ನಿಪಿ.6 ರಲ್ಲಿ ಉಲ್ಲೇಖಿಸಿರುತ್ತೇನೆ. ಪತ್ರಬರೆದುಕೊಡುವವರ ಹೆಸರಿನಲ್ಲೇ ಖಾತೆ ಇರುವ ಕಾರಣ, ಯಾವುದೇ ದಾಖಲೆಯನ್ನು ಸರಿಪಡಿಸುವ ಪ್ರಮೇಯ ಬರುವುದಿಲ್ಲ, ನೇರವಾಗಿ ಕ್ರಯಪತ್ರ ನೊಂದಾವಣೆ ಮಾಡಬಹುದು ಎಂದರೆ ಸರಿಯಲ್ಲ. ನಾನು ಬರೆದ ನಿಪಿ.6 ರ ಕರಾರು ಪತ್ರವನ್ನು ನೋಂದಾವಣೆ ಮಾಡಲು ನನಗೆ ತೊಂದರೆ ಇರುಲಿಲ್ಲ. ಸಾಕ್ಷಿ ಮುಂದುವರೆದು, ನೋಂದಾವಣೆ ಮಾಡುವುದು ಬಿಡುವುದು ಪಕ್ಷಗಾರರಿಗೆ ಬಿಟ್ಟ ವಿಚಾರಗಳು ಎಂದು ನುಡಿಯುತ್ತಾರೆ. ಚಿಕ್ಕನಾಗಮ್ಮ ಯಾವತ್ತೂ ನಿಪಿ.6 ನ್ನು ಬರೆದುಕೊಡದ ಕಾರಣ ನಾನು ಸದರಿ ದಾಖಲೆಯನ್ನು ನೋಂದಾವಣೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

9 ತಿಂಗಳ ನಂತರ ವಾದಿಯಾಗಲೀ, ಸಾಕ್ಷಿದಾರರಾಗಲಿ ಚಿಕ್ಕನಾಗಮ್ಮ ಅವರು ಕರಾರು ಪತ್ರದಂತೆ ಬಂದು ಶುದ್ಧ ಕ್ರಯಪತ್ರ ಬರೆದುಕೊಡುತ್ತಿಲ್ಲ ಎಂದು ನನ್ನ ಬಳಿ ಬಂದು ಹೇಳಿರುವುದಿಲ್ಲ. ಕರಾರು ಪತ್ರದಲ್ಲಿ ನನ್ನ ಕಣ್ಣ ಮುಂದೆ ಸಹಿ ಮಾಡುವಾಗ ಸಹಿ ಮಾಡುವ ಸ್ಥಳವನ್ನು ಕ್ರಾಸ್ ಗುರುತಿನಲ್ಲಿ ಗುರುತಿಸುವ ಅಗತ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ಕ್ರಾಸ್ ಗುರುತನ್ನು ನಾನೇ ಮಾಡಿರುತ್ತೇನೆ. ಸದರಿ ಕ್ರಾಸ್ ಗುರುತನ್ನು ಬೇರೆ ಕಡೆ ಸಹಿ ಪಡೆಯುವ ಉದ್ದೇಶದಿಂದ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ರಾಮಕೃಷ್ಣಪ್ಪ ಮತ್ತು ಸಾಕ್ಷಿದಾರರು ಸೇರಿಕೊಂಡು ಚಿಕ್ಕನಾಗಮ್ಮ ಅವರ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.